ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 23/12/2019

# ಮರು ನೇಮಕಕ್ಕೆ ಸಚಿವಾಲಯದ ಮಾಜಿ ಕಾರ್ಯದರ್ಶಿ ಸಿಎಂಗೆ ಪತ್ರ

**ಬೆಂಗಳೂರು:** ಹೈಕೋರ್ಟ್ ತೀರ್ಪಿನ ಒಂದು ಅಂಶ ಹಾಗೂ ನೇಮಕ ಪ್ರಾಧಿಕಾರದ ಸೂಚನೆಗಳನ್ನು ಉಲ್ಲೇಖಿಸಿ, ಮರು ನೇಮಕ ಮಾಡಿಕೊಳ್ಳಬೇಕೆಂದು ವಿಧಾನಸಭೆ ಕಾರ್ಯದರ್ಶಿ ಸ್ಥಾನದಿಂದ ಅಮಾನತುಗೊಂಡಿರುವ ಎಸ್.ಮೂರ್ತಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಸಿಎಂ ವಿಧಾನಸಭಾಧ್ಯಕ್ಷ, ಸಭಾಪತಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿಗೆ ಬರೆದ ಪತ್ರದಲ್ಲಿ ತಮ್ಮ ಮರು ನೇಮಕದ ಔಚಿತ್ಯ ಸಮರ್ಥಿಸಿಕೊಂಡಿರುವ ಮೂರ್ತಿ, ನಿಗದಿತ ಗಡುವಿನೊಳಗೆ ಇಲಾಖಾ ವಿಚಾರಣೆ ಮುಗಿದಿಲ್ಲ. ವಿಧಾನಸಭೆ ಸಚಿವಾಲಯ ಹಾಗೂ ಶಾಸಕಾಂಗದಲ್ಲಿ 30 ವರ್ಷಗಳ ಕಾಲ ನಿಷ್ಠೆ, ಪ್ರಾಮಾಣಿಕತೆ ಯಿಂದ ಸೇವೆ ಸಲ್ಲಿಸಿರುವೆ ಎಂದು ಹೇಳಿಕೊಂಡಿದ್ದಾರೆ. ಅಮಾನತು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿ ಡಿ.19ರಂದು ನೀಡಿರುವ ತೀರ್ಪಿನಲ್ಲಿ ವಿನಾಕಾರಣ ಸರ್ಕಾರಿ ನೌಕರನನ್ನು ದೀರ್ಘಾವಧಿವರೆಗೆ ಅಮಾನತಿನಲ್ಲಿ ಇರಿಸುವಂತಿಲ್ಲ. ನಿಗದಿತ ಕಾಲಮಿತಿಯೊಳಗೆ ಇಲಾಖಾ ವಿಚಾರಣೆ/ ತನಿಖೆ ನಡೆಸುವಲ್ಲಿ ಸಕ್ಷಮ ಪ್ರಾಧಿಕಾರ ವಿಫಲವಾಗಿದೆ ಎಂಬ ಉಲ್ಲೇಖ, ಸೂಚನೆಗಳನ್ನು ಮೂರ್ತಿ ಈ ಮನವಿಯಲ್ಲಿ ವಿವರಿಸಿದ್ದಾರೆ.